


International Journal of Kannada Research
www.kannadajournal.com

**ISSN: 2454–5813**
IJKR 2023; 9(2): 187-190
© 2023 IJKR
www.kannadajournal.com
Received: 02-03-2023
Accepted: 08-04-2023

**ಅಭೀಲಾಷ ಎಂ**
ಸಂಶೋಧನಾರ್ಥಿ, ಸ್ನಾತಕೋತ್ತರ ಕನ್ನಡ ಭಾರತಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ, ಕರ್ನಾಟಕ, ಭಾರತ

**ಮತ್ತು ಡಾ. ಕೇಶವ ಶರ್ಮ ಕೆ**
ಪ್ರಾಧ್ಯಾಪಕರು (ನಿ), ಸ್ನಾತಕೋತ್ತರ ಕನ್ನಡ ಭಾರತಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ, ಕರ್ನಾಟಕ, ಭಾರತ

**Corresponding Author:**
**ಅಭೀಲಾಷ ಎಂ**
ಸಂಶೋಧನಾರ್ಥಿ, ಸ್ನಾತಕೋತ್ತರ ಕನ್ನಡ ಭಾರತಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ, ಕರ್ನಾಟಕ, ಭಾರತ

# ಜಾನಪದ ಕಥನ ಕವನಗಳಲ್ಲಿ ಸಾಹಿತ್ಯದ ನೆಲೆ–ಒಂದು ವಿಶ್ಲೇಷಣೆ

**ಅಭೀಲಾಷ ಎಂ, ಮತ್ತು ಡಾ. ಕೇಶವ ಶರ್ಮ ಕೆ**

**ಪೀಠಿಕೆ**

ಜಾನಪದವು ಸಾಗರದಷ್ಟು ಆಳ ಮತ್ತು ಆಕಾಶದಷ್ಟು ವಿಸ್ತಾರವಾಗಿದೆ, ಅದಕ್ಕೆ ಹಿರಿಯ ವಿದ್ವಾಂಸರು– "ಹರಿಯ ಒಡಲಲ್ಲಿ ಬ್ರಹ್ಮಾಂಡ ಅಡಗಿರುವಂತೆ, ಜಾನಪದ ಕುಕ್ಷಿಯಲ್ಲಿ ಇಡೀ ಜಗತ್ತೆಲ್ಲವೂ ಹುದುಗಿದೆ" ಎಂದಿದ್ದಾರೆ, ಜಾನಪದವು ಒಂದು ವಿಶೇಷ ಸಾಹಿತ್ಯದ ವಿಷಯವಾಗಿ ಬೆಳೆದಿದೆ. ಮಾನವನು ತನ್ನ ಬುದ್ದಿ ಶಕ್ತಿ ಮತ್ತು ಕ್ರಿಯಾಶೀಲತೆಯಿಂದ ನಿಸರ್ಗವನ್ನು ತನಗೆ ಬೇಕಾದಂತೆ ಬಳಸಿಕೊಳ್ಳುವ ಜ್ಞಾನ ಮತ್ತು ವಿಜ್ಞಾನವನ್ನು ಸಂವರ್ಧನೆ ಮಾಡಿಕೊಂಡು ಸುಖ ಸಂತೋಷವನ್ನು ಅನುಭವಿಸತೊಡಗಿದನು, ಮಾತು ಕಥೆ, ಹಾಡು–ಪಾಡು–ಕುಣಿತ–ಮರೆತ, ಹಬ್ಬ ಹರಿದಿನ, ಆಟೋಟಗಳ ನಂಬಿಕೆ ಸಂಪ್ರದಾಯಗಳು, ಆಚರಣೆ ಆರಾಧನೆಗಳೆಲ್ಲವನ್ನು ಬದುಕಿನೊಂದಿಗೆ ಬೆಸದುಕೊಂಡನು, ಬದುಕಿನ ಪ್ರತಿಯೊಂದು ಕ್ರೀಯೆಯೂ ಸಾಧ್ಯವಾಗುವಂತೆ ತನ್ನನು ತಾನು ತೊಡಗಿಸಿಕೊಂಡನು ಅದರ ಪಲವೋ ಎಂಬತೆ ಮೌಖಿಕ, ವಾಚಿಕ, ಕಂಠಸ್ಥ, ರೂಡಿ, ಸಂಪ್ರದಾಯವು ಎಲ್ಲಿಯೂ ಸ್ಥಗಿತವಾಗದೆ ಪರಂಪರಾಗತವಾಗಿ ಮುಂದುವರಿಯಿತು, ಪುರಾಣ, ಐತಿಹ್ಯ, ಗೀತೆ, ಕಥೆ, ಗಾದೆ ಒಗಟು, ಲಾವಣೆ, ಭಾಷೆ, ನಂಬಿಕೆ, ವಿಭಿನ್ನ ಆಚರಣೆ, ವೈದ್ಯ, ವ್ಯವಸಾಯ, ಆಡುಗೆ, ಬೆಡ ಆಟ, ಮಂತ್ರ–ಮಾಟ ಮುಂತಾದ ಕಲೆಗಳು ಸಮೃದ್ದಿಯಾಗಿ ಬೆಳೆಯುತ್ತ ಅವಿನಾಭಾವದಾಗಿ ಬದುಕಿನೊಂದಿಗೆ ಬೆರೆತು ಪಿತ್ರಾರ್ಜಿತ ಆಸ್ತಿಯಂತೆ ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಯಾಗುತ್ತ ಬಂದಿತು. ಕೇಳಿದ್ದನ್ನು ನೆನೆಪಿನಲ್ಲಿಡುವುದು, ನೋಡಿದ್ದನ್ನು ಅನುಕರಣೆ ಮಾಡುವುದು, ಮೌಖಿಕ ಪರಂಪರೆಯಲ್ಲಿ ಅನೂಚಾನವಾಗಿ ಸಾಗಿಬರುವ ನಡವಳಿಕೆಗಳ ಒಟ್ಟು ಮೊತ್ತವೇ ಜಾನಪದ ಸಾಮಾಗ್ರಿ, ಮಾನವನ ಬದುಕಿನ ಸಮಸ್ತವೂ ಅದರಲ್ಲಿ ಸಮಾವೇಶವಾಗುತ್ತದೆ.

ಬಾಳಪಯಣದ ನೋವು–ನಲಿವು, ಸೋಲು–ಗೆಲುವು, ಎತ್ತರ–ಬಿತ್ತರ, ಸುಖಃ–ದುಖಃ, ಕಷ್ಟ–ಕಾರ್ಪಣ್ಯ ಎಲ್ಲಾ ಭಾವನೆಗಳು ಅನುಭವದಲ್ಲಿ ಬೆಂದು ಪರಿಶುದ್ದವಾಗಿ ಅಲ್ಲಿನ ಪರಿಸರಕ್ಕೆ ಅನುಗುಣವಾಗಿ ಹಾಡು, ಹಾಸ್ಯ, ಕಥೆ, ಕುಣಿತ, ಮರೆತ, ಗಾದೆ, ಒಗಟು ಮುತಾಂದ ರೂಪವನ್ನು ತಳೆದು ಆಯಾಮ ಜಾನಪದವು ಸಮುದಾಯ ಆತ್ಮಚರಿತ್ರೆಯಂತಾಯಿತು, ಜಾನಪದವು ಅಪ್ಪಟ್ಟ ಸಂಸ್ಕೃತಿಯ ಪ್ರತಿನಿಧಿಯಂತೆ ರೂಪ ತಾಳಿತು, ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಜನ ಸಮುದಾಯವನ್ನು ಜಾನಪದರು ಎಂದು ಕರೆಯಬಹುದು. ಸಮಾನ ಅಂಶ ಅಥವಾ ಅಂಶಗಳುಳ್ಳ ಜನರ ಗುಂಪನ್ನು "ಜನ" ಎನ್ನಬಹುದು, ತಮ್ಮದೆ ಆದ ಪರಂಪರೆಯನ್ನು ಹೊಂದಿದ ಧರ್ಮ, ಮತ, ಕಸುಬು, ಯಾವುದಾದರೂ ಸಮಾನ ಅಂಶವಾಗಿರಬಹುದು. ಪರಂಪರೆ ಆ ಗುಂಪಿನ ಆರಾಧನೆ, ಆಚಾರ, ವಿಚಾರ, ನಂಬಿಕೆ, ದೊರಣೆಗಳನ್ನು ವ್ಯಕ್ತಪಡಿಸುತ್ತದೆ. ಒಂದು ನಿರ್ದಿಷ್ಟ ಜನಸಮುದಾಯದಲ್ಲಿ ತಲೆಮಾರಿನಿಂದ ತಲೆಮಾರಿಗೆ ಮೌಖಿಕ ರೂಪದಲ್ಲಿ ಸಾಗಿ ಬರುವ ಸಂಗೀತ, ಸಾಹಿತ್ಯ, ಕರಕುಶಲ ಕಲೆ, ನಡವಳಿಕೆ, ಸಂಪ್ರದಾಯ, ಆಚರಣೆ, ಆಟ, ಪಾಠ ಮೊದಲಾದ ಜನಪದದ ಸಮಗ್ರ ಮೊತ್ತವೇ ಜಾನಪದ.

ಜಾನಪದ ಸಾಹಿತ್ಯ ನಿಂತ ನೀರಲ್ಲ: ಸ್ವಾರ್ಥ ಮೂಲವಾದದ್ದೂ ಅಲ್ಲ ಸಂಚಲನೆ, ಪರಿವರ್ತನೆ, ಸ್ವೀಕಾರ, ಕೊಳ್ಳುಕೊಂಡ ಅದರ ಮೂಲ ಮಂತ್ರ, ನಾವು ಎಷ್ಟೇ ಮುಂದುವರಿದಾದರೂ ನಮ್ಮ ಪೂರ್ವೀಕರು ಪ್ರಾಚೀನ ಜನತೆಯ ಸಾಹಿತ್ಯ, ಸಂಸ್ಕೃತಿ, ಸಂಪ್ರದಾಯ, ಪರಂಪರೆಯನ್ನು ಕಡೆಗಣಿಸಲಾಗದು, ನಮ್ಮ ಪೂರ್ವೀಕರು ನಮಗೆ ಬಿಟ್ಟು ಹೊಗಿರುವ ಅಮೂಲ್ಯವಾದ ಜಾನಪದ ಸಂಪತ್ತು ನಮ್ಮ ಬದುಕಿನೊಂದಿಗೆ ಬೆಸೆದುಕೊಂಡಿದೆ, ನಿತ್ಯ ನಿರಂತರ ಕೆಲಸದ ಶ್ರಮದ ತೀವ್ರತೆಯನ್ನು

ಕುಗ್ಗಿಸಿ ಬದುಕಿನ ಏಕತಾನತೆಯನ್ನು ಹೊಗಲಾಡಿಸಿ ಮನಸ್ಸನ್ನು ಮುದಗೊಳಿಸುತ್ತದೆ. ಮಲ್ಲಿಗೆಯಂತೆ ಮನಸ್ಸನ್ನು ಅರಳಿಸಿ ಶ್ರೀಗಂಧದಂತೆ ಸುವಾಸನೆಯನ್ನು ಪಸರಿಸುವಂತೆ ಮಾಡಿ ಸಾಮರಸ್ಯದಿಂದ ಬದುಕಿ ಬಾಳುಲು ನೆರವಾಗುವಂತೆ ವ್ಯಕ್ತಿತ್ವವನ್ನು ರೂಪಿಸುತ್ತದೆ. ಪ್ರಕೃತಿ ವಿಕೋಪದ ಮುನ್ಸೂಚನೆಯನ್ನು ನಿಡಬಲ್ಲ ನಿಸರ್ಗದ ವಿಚಿತ್ರಗಳನ್ನು ಗುರುತಿಸಿ ಅಪಾಯದಿಂದ ಪಾರು ಮಾಡಬಲ್ಲ ಜ್ಞಾನ ಸಂಪತ್ತು ಜಾನಪದದಲ್ಲಿ ಅಡಗಿದೆ.

ಪ್ರೇಮ, ತ್ಯಾಗ, ಮುತ್ಸದ್ಯ್, ಸಾಹಸ, ಛಲ, ಧ್ವೇಷ, ಬಂಜೆತನ, ಹೆಣಿನ ಪಾತಿವ್ರತ್ಯೆ, ಮನುಷ್ಯನ ಜಿಪುಣತನ, ಕಷ್ಟ ಕಾರ್ಪಣ್ಯ, ಸೋಲು, ನಿರಾಸೆ ಇತ್ಯಾದಿ ಮನುಷ್ಯನ ನಿತ್ಯ ಜೀವನದ ಸಮಸ್ತವನ್ನು ಅಭಿವ್ಯಕ್ತಿಗೊಳಿಸುತ್ತದೆ, ಜೀವನದ ಆದರ್ಶವನ್ನು ಉಳಿಸುವ ನೈತಿಕ ಮೌಲ್ಯವನ್ನು ಎತ್ತಿ ಹಿಡಿಯುವ ಮೌಲ್ಯನುಸರಣೆಯ ಸಂದೇಶವನ್ನು ಸಾರುವ, ಆದರ್ಶ ಸಮಾಜವನ್ನು ಉಳಿಸಿ ಬೆಳೆಸುವ ಸಾಮರ್ಥ್ಯವು ಜಾನಪದ ಸಂಸ್ಕೃತಿಯಲ್ಲಿ ಅಡಕವಾಗಿದೆ. ಜಾನಪದದಲ್ಲಿರುವುದೆಲ್ಲ ಜೀವನದಲ್ಲಿದೆ, ಜೀವನದ ಸಮಸ್ತವು ಜಾನಪದದಲ್ಲಿದೆ, ಜೀವನವೇ ಜಾನಪದ ಜಾನಪದವೆ ಜೀವನವೆಂದಾದರೆ ಯಾವ ಸಂಕಷ್ಟಗಳು ಹತ್ತಿರ ಸುಳಿಯವು ಮೋಹದಾಹ, ಮದ–ಮತ್ಸರ, ತಳಮಳ, ತಲ್ಲಣಗಳು ತಾವಾಗಿಯೆ ದೂರ ಸರಿಯುತ್ತದೆ ಬಾಳು ಬಂಗಾರವಾಗುತ್ತದೆ. ಬದುಕಿನ ಎಲ್ಲಾ ಮುಖಗಳನ್ನು ಒಳಗೊಂಡ ಸಮಷ್ಠಿ ಪ್ರಜ್ಞೆಯ ಸೃಷ್ಟಿಯೇ ಆಗಿರುವ ಜಾನಪದದ ಅಧ್ಯಯನ ಊಹಾತ್ಮಕ ಶಾಸ್ತ್ರವಲ್ಲ ವಾಸ್ತವಿಕ ಆಧಾರಗಳ ಮೇಲೆ ನಿಂತಿರುವ ವಿಜ್ಞಾನ ಆಧುನಿಕ ಬದುಕನ್ನು .ವ್ಯವಸ್ಥೆಯನ್ನಾಗಿ ರುಪಿಸಿಕೊಳ್ಳಲು ಜಾನಪದದ ಅರಿವು ಸಹಾಯಕವಾಗುತ್ತದೆ.

ಮನುಷ್ಯನ ಸಂಸ್ಕೃತಿಯ ಪರಿಪೂರ್ಣ ಅರಿವಿಗೆ ಜಾನಪದ ಅಧ್ಯಯನ ಅತ್ಯಗತ್ಯ ಸಂಸ್ಕೃತಿಯ ಅಧ್ಯಯನದಲ್ಲಿ ಇದು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ, ಜಾನಪದವನ್ನು ಹೊರೆತುಪಡಿಸಿ ಸಂಸ್ಕೃತಿಯ ಅಧ್ಯಯನ ಸಾಧ್ಯವೇ ಇಲ್ಲ ಎನ್ನುವುದು ವಾಸ್ತವಾ. ಜಾನಪದವು ಕಲೆಯೂ ಹೌದು, ಶಾಸ್ತ್ರವೂ ಹೌದು, ಜಾನಪದ ಅಧ್ಯಯನ ಒಂದು ಶಾಸ್ತ್ರವಲ್ಲ, ಹಲವು ಶಾಸ್ತ್ರಗಳ ಸಮಷ್ಠಿ ಯಾರು ತಮ್ಮ ಶಾಖೆಯ ಎಂದು ಹಕ್ಕು ಚಲಾಯಿಸುವಂತಿಲ್ಲ ಎಷ್ಟೋ ವಿಷಯಗಳ ಮೇಲೆ ಜಾನಪದ ಅಮೂಲ್ಯವಾದ ಬೆಳಕು ಚೆಲ್ಲುತ್ತದೆ.

ಸಾಂಪ್ರದಾಯಿಕ ಶಿಕ್ಷಣದ ಸಾಧನವಾಗಿರುವ ಜಾನಪದ ಪುರಾಣ ಐತಿಹ್ಯಗಲ ಅರಿವಿಗೆ ಸಹಾಯಕವಾಗಿದೆ ಅಬಾಲವೃದ್ದರಿಗೆ ನೈತೀಕ ಶಿಕ್ಷಣ ನಿಡುವಲ್ಲಿ ಪ್ರಮುಖ ಪಾತ್ರವಹಿಸುವ ಜಾನಪದ ಕಥೆಗಳು, ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿದು ಜನಸಮುದಾಯ ತಪ್ಪು ದಾರಿತಪ್ಪದಂತೆ ಎಚ್ಚರಿಕೆ ಸಮಾಜವನ್ನು ನಿಯಂತ್ರಿಸುವ ಆಪತ್ತಿನಿಂದ ಪಾರುಮಾಡುವ ಚೈತನ್ಯವನ್ನು ಹೊಂದಿವೆ. ಜನಪದ ಸಾಹಿತ್ಯ ನೇಲೆಯಲ್ಲಿ ಬರುವ ಪ್ರಮುಖ ಅಂಶಗಳನ್ನು ನಾವು ಅಧ್ಯಯನ ಮಾಡಲಾಗಿದೆ.

- ಗ್ರಾಮದ ಗಾದೆಗಳು
- ಒಗಟುಗಳು
- ಬೈಗುಳಗಳು
- ಜಾನಪದ ಆಚರಣೆಗಳು
- ಹಾಡುಗಳು/ ಗಿತೆಗಳು

ಗ್ರಾಮದ ಗಾದೆಗಳು : ಗಾದೆ ಒಂದು ನಾಡಿನ ಜನಸಾಮಾನ್ಯರು ನಿತ್ಯ ವ್ಯವಹಾರದಲ್ಲಿ ಸಹಜವಾಗಿ ಬಲಸುವ ರೂಢಿಗತ ಅಲಂಕಾರಿಕ ಮಾತು, ವೇದಗಳು ಅಕ್ಷರ ಬಲ್ಲವರಿಗೆ ಮಾತ್ರ ಸೀಮಿತವಾದರೆ ಗಾದೆ ಸಕಲರ ಸೊತ್ತು ಗಾದೆಗಳು ವೇದಾದ ಜ್ಞಾನದಂತೆ ನಿರ್ದಿಷ್ಟವಾದುದ್ದಲ್ಲ ಕಾಲ ಕಾಲಕ್ಕೆ ಬೆಳೆಯುತ್ತಾ ಹೋಗುವ ಜ್ಞಾನ ಶಾಖೆಯಾಗಿದೆ, ಗಾದೆಗಳು ಸಂಸ್ಕೃತದ ಮೌಲ್ಯವನ್ನು ಬಿತ್ತರಿಸುತ್ತದೆ, ಹಾಗಾಗಿ ಕರ್ನಾಟಕ ರಾಜ್ಯದಲ್ಲಿನ ಗ್ರಾಮೀಣ ಜನರು ಮಾತನಾಡುವ ಸಂದರ್ಭದಲ್ಲಿ ಹಲವು ಗಾದೆಗಳನ್ನು ಬಳಸುತ್ತಾರೆ. ಸಮಯಕ್ಕೆ ಸರಿಯಾಗಿ ಗಾದೆ ಬಾರದೆ ಹೋದರೆ ಹಿಂದಕ್ಕೆ ಏನೋ ಗಾದೆ ಹೇಳಿದ ಹಾಗಾಯ್ತು ಎಂದು ಹೆಳುವುದರ ಮೂಲಕ ಅದರ ಅವಶ್ಯಕತೆಯನ್ನು ಒತ್ತಿ ಹೇಳುತ್ತಾರೆ, ಗಾದೆ ಹಾಡು ಮಾತಿನ ಜೀವಸತ್ವ ಎಂಬುದನ್ನು ಇದು ತೋರಿಸಿಕೊಡುತ್ತದೆ, ಊಟಕ್ಕೆ ಉಪ್ಪಿನಕಾಯಿಯಂತೆ ಗಾದೆ ಮಾತಿಗೆ ವ್ಯಂಜನ ಶಕ್ತಿಯನ್ನು ಒದಗಿಸುತ್ತದೆ, ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆಯೇ ಗಾದೆಯ ಸ್ವರೂಪವನ್ನು ತಿಳಿಸುತ್ತದೆ. ಗಾದೆ ಜನಜೀವನದ ವ್ಯಾಪಕ ಸತ್ತ್ವ, ತತ್ತ್ವ, ನೂರು ಭಾವದ ನೂರು ವಿಷಯದ ನೂರು ಅಭಿವ್ಯಕ್ತಿ ಇಲ್ಲಿ ವ್ಯಕ್ತಗೊಂಡಿರುವ ಅನುಭವ ಜಗತ್ತು ಅನ್ಯಾ ದೃಶ್ಯವಾದದ್ದು, ಹಾಗೆ ನೋಡಿದಾಗ ಇವುಗಳ ಕರ್ತಾರಿಯನ್ನು ಅಸಂಸ್ಕೃತಿರೆನ್ನುವುದು ದೂರದ ಮಾತಾಗಿಯೇ ಉಳಿಯುತ್ತದೆ, ಗ್ರಾಮ ಜೀವನಕ್ಕೆ ಕಾಲಿರಿಸಿದ ಕೂಡಲೇ ಇಂಥ ಗಾದೆಗಳ ಬಿಸಿ ತಾಗುತ್ತದೆ ಕೆಲವು ಬೆಳದಿಂಗಳಿನಂತೆ ತಂಪಾದರೆ ಮತ್ತೆ ಕೆಲವು ಬಿಸಿಲಿನಂತೆ ಮೈ ಸುಡುತ್ತವೆ, ಬೆಂಕಿಯ ಕಿಡಿಗಳಂತೆ ಕಾಲವಾದರೆ ಇಬ್ಬಾನಿಯಂತೆ ಮತ್ತೆ ಕೆಲವು, ಕೆಲವು ಮುತ್ತಿಕ್ಕಿದರೆ ಮತ್ತೆ ಕೆಲವು ಮುತ್ತಿಗೆ ಹಾಕುತ್ತವೆ, ಇನ್ನೂ ಕೆಲವಂತೂ ಸಿಡಿಲಪೊಟ್ಟಣಗಳೇ ಸರಿ ಇವಕ್ಕೆ ಅಪಮೌಲ್ಯ ಭಯವಿಲ್ಲ ಕೊಳೆಕಟ್ಟಿ ಮಸಿ ಹೊಗುತ್ತವೆ ಎಂಬ ಶಂಕೆಯಿಲ್ಲ ಇವು ನೀರಸ ಕವಿ ಸಮಯಗಳಲ್ಲ ವಿಚಾರದ ವಸ್ತು ಲಿಂಗಗಳು ಸೂಕ್ತ ಸಂದರ್ಭಗಳಲ್ಲಿ ತಾಳಿದ ಯೋಗ್ಯ ನಿರ್ಣಯಗಳು.

ಗಾದೆ ಹಲವಾರು ಮಾತುಗಳ ಘಟಕ ಆದ್ದರಿಂದಲೇ ಅದು ಸಾವಿರ ಮಾತಿನ ಸರದಾರ ಗಾದೆಯ ಮತ್ತೊಂದು ಅಂಶ ವಿವೇಕ ಪೂರ್ಣತೆ ಗಾದೆ ಜನಪ್ರಿಯವಾಗಬೇಕಾದರೆ ಬಹಳ ಕಾಲ ಬಾಳಿಕೆ ಬರಬೇಕಾದರೆ ಕಡೆಯ ಪಕ್ಷ ಅದು ವಿವೇಕಯುತವಾಗಿ ಇರಬೇಕಾಗುತ್ತದೆ ಗಾದೆ ತೀವ್ರ ಅನುಭದ ಪರಿಣಾಮಕಾರಿ ಅಭಿವ್ಯಕ್ತಿಯಾಗಿರುವುದೇ ಅದರ ತೀಕ್ಷಣತೆ ಸೂಕ್ಷ್ಮ ಸಂವೇದನಾಶೀಲತೆಯೇ ಇದಕ್ಕೆ ಕಾರಣ ಒಮ್ಮೆಗೆ ನಮ್ಮ ಹೃದಯವನ್ನು ಆಕ್ರಮಿಸುವ ಸಾಮರ್ಥ್ಯ ಅದರದು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಯೂರುವಂಥವು ಗಾದೆಗಳಲ್ಲಿ ಹಾಸ್ಯ ಮತ್ತು ವಿಡಂಬನೆಗಳು ಬರುತ್ತಾವೆ. ಗಾದೆಯ ಉಗಮವನ್ನು ಕುರಿತು ನಿರ್ದಿಷ್ಟವಾಗಿ ಹೇಳಲಾಗದು ಇದು ಜಾನಪದ ಸಂಸ್ಕತಿಯಲ್ಲಿ ಹುಟ್ಟಿ ಬೆಳೆದುದ್ದು ಮತ್ತು ಸಮಾಜದಷ್ಟು ಹಳೆಯದ್ದು ಒಂದು ಕಡೆ ಗಾದೆ ಯಾರೊಬ್ಬ ಜನ್ಮದಾತನು ಇಲ್ಲದೆ ಕ್ರಮೇಣ ಜನತೆಯ ನಡುವೆ ಜನತೆಯಾಗಿ ವಿಕಾಸವಾದುದ್ದು ಆಗಿರಬೇಕು ಇದು ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಬೆಳೆಯಿತು ಉಳಿಯಿತು ಗಾದೆ ಜ್ಞಾನದ ಅನಂತ ಆಕಾಶವನ್ನು ನಿಂತಲ್ಲಿಯೆ ನೊಡಬಲ್ಲ ನೀತಿ ನಿರ್ಣಯಗಳ ದೂರದರ್ಶಕ ಇದರಲ್ಲಿ ಎದ್ದು ಕಾಣುವುದು ಜನಸಾಮಾನ್ಯರ ಸಾಮಾನ್ಯ ಜ್ಞಾನ ಜೀವನದ ನಾನಾ ಭಾಗಗಳಲ್ಲಿ ಅವರಿಗಿರುವ ಜ್ಞಾನದ ಅನುಭವಗಳನ್ನು ಇಲ್ಲಿ ವಿವೇಕದ ಒರೆಗಲ್ಲಿಗೆ ಹಚ್ಚಿ ನೋಡಿದೆ ಗಾದೆ ಸಾಮಾನ್ಯ ಜನತೆಯ ವೇದ, ಗಾದೆ, ವೇದಕ್ಕೆ, ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ ವೇದ ಕೆಲವರ ಮಾತು, ಗಾದೆ ಹಲವರ ನುಡಿ.

ಒಗಟುಗಳು : ಕ್ರೂಡೀಕೃತ ಆಲೋಚನಾ ಪ್ರಕಾರವಾದ ಒಗಟುಗಳು ಜಾನಪದದ ವಿವೇಕ, ಜಾಣ್ಮೆ, ಸೃಜನಶೀಲತೆ,

ಚತುರತೆ, ಪ್ರತಿಭೆ ಮತ್ತು ಕಲ್ಪನಾ ಶಕ್ತಿಗೆ ಹಿಡಿದ ಕನ್ನಡಿಯಂತಿದೆ, ಸಮಸ್ಯಾತ್ಮಕವಾದ ಅಭಿವ್ಯಕ್ತಿಯಾಗಿರುವ ಒಗಟು ಪದವೂ ಪ್ರಶ್ನಕೂಟ, ವಿವಾದ, ಸಮಸ್ಯೆ ಇತ್ಯಾದಿ ಪದಗಳಿಗೆ ಸಂವಾದಿಯಾಗಿದೆ, ಒಗಟಿನ ಭಾಷೆ ಸರಳವಾದುದಲ್ಲ, ಸಾಂಕೇತಿಕವಾದುದ್ದು, ರಹಸ್ಯವನ್ನು ಕಾಪಾಡಿಕೊಂಡಿರುತ್ತದೆ ಸುಲಭವಾಗಿ ಅರ್ಥವಾಗದ ಜಟಿಲವಾದ, ನಿಗೂಢವಾದ ಸಮಸ್ಯೆಯುಂತಿರುತ್ತವೆ, ಮನರಂಜನೆಗಾಗಿ ಅಥವಾ ಬುದ್ಧಿಬೆಳವಣಿಗೆಗಾಗಿ ರಚಿಸಲ್ಪಟ್ಟ ಭಾಷ ಪ್ರಶ್ನೆಗಳ ಒಂದು ವಿಧ ಒಗಟು. ಇವು ಸಾಮಾನ್ಯವಾಗಿ ಊಹೆಯ ಮೇಲೆ ಉತ್ತರವನ್ನು ಹುಡುಕುವ ಪ್ರಯತ್ನ ದಿಗ್ಭ್ರಮೆ ಹಿಡಿಸುವ, ರಹಸ್ಯಾರ್ಥವುಳ್ಳ ಪ್ರಶ್ನಾರ್ಥಕ ಹೇಳಿಕೆಗಳು ಪ್ರತಿಯೊಂದರಲ್ಲಿ ಸಮಸ್ಯೆಯೊಂದಿದ್ದು ಸುಲಭವಾಗಿ ಬಿಡಿಸಲಾರದ ರೀತಿಯಲ್ಲಿ ಸಂಯೋಜಿತವಗಿರುತ್ತದೆ, ಇದರಲ್ಲಿ ಒಡ್ಡಿದ್ದು ಬಂದಿದ್ದಾರೆ, ಒಡೆಸುವುದು ಮತ್ತೊಂದು ಇರುತ್ತದೆ. ಒಗಟುಗಳು ಒಂದು ಬಗೆಯ ಜಾಣ್ಮೆಗೆ ಒರೆಗೆ ಒಟ್ಟುವ ತಿರುಳು–ಮುರುಳಾದ ಪ್ರಶ್ನೆಗಳು ಇದನ್ನು ಬೇರೊಬ್ಬರನ್ನು ಅಳೆಯಲು ಮನರಂಜಿಸಲು ಹುಟ್ಟಿಕೊಂಡ ಪದ್ದತಿ ಪ್ರಶ್ನೆಗೆ ಉತ್ತರ ಗೊತ್ತಾದ ತಕ್ಷಣ "ಓ" ಎಂದು ಅಚ್ಚರಿಗೊಳ್ಳುತ್ತಾರೆ.

ಒಂದು ದೃಷ್ಠಿಯಲ್ಲಿ ಒಗಟು ಹಾಸ್ಯದ ಫಲ ಮತ್ತೊಂದು ದೃಷ್ಠಿಯಲ್ಲಿ ಪ್ರಕೃತಿಯಲ್ಲಿ ಸಾದೃಶ್ಯವನ್ನು ಕಾಣುವ ಮನುಷ್ಯ ಸಾಮರ್ಥದ ಪಲಿತಾಂಶ, ಊಹೆಯಿಂದ ಬಿಡಿಸಬೇಕಾದ ಸಂದಿಗ್ದಮಯವಾದ ಹೇಳಿಕೆ. ಸಾಹಿತ್ಯ ಪ್ರಕಾರಗಳಂತೆ ಒಗಟು ಸಹಾ ಎಲ್ಲಿಯೋ ಹುಟ್ಟಿ ಎಲ್ಲಿಯೋ ಬೆಳೆದು ಎಲ್ಲರ ಮನೆಯಂಗಳದಲ್ಲಿ ರಾರಾಜಿಸುತ್ತದೆ, ವಾಸ್ತವ ಅರ್ಥವನ್ನು ಮುದ್ರಿಸುವ ವ್ಯಾಖ್ಯೆಯೇ ಒಗಟು ನಮ್ಮ ಗ್ರಾಮದಲ್ಲಿ ಜನರು ಬಿಡುವಿನ ವೇಳೆಯಲ್ಲಿ ತಮ್ಮ ಮನರಂಜನೆಗಾಗಿ ಹಾಗೂ ಕಾಲವನ್ನು ಕಳೆಯುವುದಕೋಸ್ಕರ ಈ ಒಗಟುಗಳನ್ನು ಬಿಡಿಸುವುದು ಮತ್ತು ಹೇಳುವುದು ಗ್ರಾಮದ ಜನರಲ್ಲಿ ಹಾಸು ಹೊಕ್ಕಾಗಿದೆ.

ಬೈಗುಳಗಳು : ಮಾತನಾಡುವ ಪ್ರತಿಯೊಬ್ಬ ಮನುಷ್ಯನು ಸಂದರ್ಭನುಸಾರ ಬೈಗುಳಗಳನ್ನು ಬಳಸಿಯೇ ಬಳಸುತ್ತಾರೆ, ಮನುಷ್ಯ ತನ್ನ ಭಾವನೆಗಳನ್ನು ಅದರಲ್ಲೂ ಕೋಪ, ತಿರಸ್ಕಾರಗಳನ್ನು ಬೈಗುಳಗಳ ಮುಲಕ ವ್ಯಕ್ತಪಡಿಸುತ್ತಾನೆ, ಅವನು ಈ ಬೈಗುಳಗಳನ್ನು ತನ್ನ ಸುತ್ತಲಿರುವ ಪರಿಸರದಿಂದಲೇ ಕಲಿಯುತ್ತಾನೆ. ಬೈಗುಳಗಳು ಕೇವಲ ಭಾವಭಿವ್ಯಕ್ತಿ, ಭಾವೊಪಯಾಗಿ ಉಪಯೋಗವಾಗಬೇಕಷ್ಟೆ ಹೊರೆತು ಅವಕ್ಕೆ ಅರ್ಥ ಹುಡುಕುವುದು ಮೂರ್ಖತನವಾಗುತ್ತದೆ, ಹಾಗಿದ್ದು ಬೈದವನು ತನ್ನಲ್ಲಿರುವ ಭಾವನೆಯ ಒತ್ತಡವನ್ನು ಕಳೆದುಕೊಂಡರೆ, ಬೈದುಕೊಂಡವನು ಭಾವೋದ್ರೇಕಕ್ಕೊಳಗಾಗಿ ತೀವ್ರವಾಗಿ ಪ್ರತಿಕ್ರಿಯಿಸುತ್ತಾನೆ, ಹಾಗಾಗಿ ತಮ್ಮ ಕೋಪ, ದುಗುಡಗಳನ್ನು ಭಾವನೆಗಳನ್ನು ಉದ್ವೋಗಗಳನ್ನು ಕಳೆದುಕೊಳ್ಳಲು ಬೈಗುಳಗಳು ಅನಿವಾರ್ಯ ಹಾಗೂ ಅವಶ್ಯಕ. ನಾವು ಬಳಸುವ ಬೈಗುಳ ನಮ್ಮ ಮಾತೃಭಾಷೆಯದೇ ಆಗಿರುವುದಲ್ಲದೆ ಇತರೆ ಭಾಷೆಗಳ ಬೈಗುಳಗಳೂ ಆಗಿರುತ್ತಾವೆ, ಏಕೆಂದರೆ ಹಲವು ಭಾಷೆಗಳನ್ನಾಡುವರು ನಮ್ಮ ಮಧ್ಯ ಇದ್ದಾರೆ, ಕೆಲವು ಬೈಗುಳಗಳು ಬೆರೆ ಭಾಷೆಯ ಬೈಗುಳಗಳೆಂದು ಕೂಡಲೇ ತಿಳಿಯುತ್ತದೆ,,, ಇನ್ನೂ ಕೆಲವು ಬೇರೆ ಬಳಕೆಯಾಗುತ್ತಿವೆ. ನಾನು ಪ್ರಸ್ತಾಪಿಸಿರುವುದು ತೀವ್ರ ಬೈಗುಳಗಳನ್ನು ತಿವ್ರ ರೋಷವನ್ನು ಹೊರಹಾಕುವಾದವು, ಕೆಲವೊಮ್ಮೆ ಅಸಹಾಯಕತೆ, ದುಗುಡಿ, ನಿರಾಶೆ, ಇವು ತಮ್ಮನ್ನು ತಾವೇ ಬೈದುಕೊಳ್ಳುವಮತೆ ಮಾಡುತ್ತವೆ. ನನ್ನ ಹಣೆಬರಹ, ನನ್ನ ಮುಖಪುಣ್ಯ ಚೆನ್ನಾಗಿಲ್ಲ, ನನ್ನ ಮುಖ ನೋಡಿದರೆ ಒಳ್ಳೆಯದು ಕೆಟ್ಟದಾಗುತ್ತದೆ ಇತ್ಯಾದಿ ಕೆಲವಂತೂ ಬೈಗುಳಗಳೆಲ್ಲದಿದ್ದರೂ ಬೈಗುಳಗಳಾಗಿ ಬಳಸುತ್ತಾರೆ.

ಬೈಗುಳಗಳು ಜಗತ್ತಿನಲ್ಲಿ ಕೋತಿ, ನಾಯಿ, ಕತ್ತೆ, ಕಿರುಬ, ಕರಡಿ ಮುಂತಾದ ಕೆಲವು ಪ್ರಾಣಿಗಳಿಗೂ ಸ್ಥಾನವಿದೆ ಅಂಗವಿಕಲತೆ, ವ್ಯಕ್ತಿಯ ಆಕಾರ ಇದ್ದು ಸಹ ಬೈಗುಳಗಳಾಗಿ ಬಳಕೆಯಾಗುತ್ತವೆ, ಕುಂಟ ದಂಡಿಯ, ಮೊಟ, ನಂಬಿಕೆ ದ್ರೋಹ, ವಂಚನೆ, ಮೋಸ ಮುಂತಾದ ಜನರ ಸ್ವಭಾವವನ್ನು ವಿವರಿಸಲೂ ಕೆಲವು ಬೈಗುಳಗಳು ಬಳಕೆಯಾಗುತ್ತವೆ, ಉಂಡ ಮನೆಗೆ ಜಂತಿ ಎಣಿಸುತ್ತಾನೆ, ನಂಬಿಸಿ ಕುತ್ತಿಗೆ ಕುಯ್ತಾನೆ, ಬೆನ್ನೆಲ್ಲಿ ಚೂರಿ ಹಾಕುತ್ತನೆ ಇನ್ನೊಬ್ಬರಲ್ಲಿರುವ ಅಂಗವಿಕಲತೆಯನ್ನು ಎತ್ತಿ ಹಿಡಿದು ಗಾದೆಯ ರೂಪದಲ್ಲಿ ಅಣಕವಾಡಿ ಬೈಯ್ಯುವುದೂ ಉಂಟು– ಕುಂಟುನಿಗೆ ಎಂಟು ಚೇಷ್ಟೆ, ಕುರುಡನಿಗೆ ನಾನಾ ಚೇಷ್ಟೆ. ಬೈಗುಳಗಳನ್ನು ಬ್ರಾಹ್ಮಣ, ಬ್ರಾಹ್ಮಣೇತರ ಎಂದು ಪ್ರತ್ಯೇಕವಾಗಿ ಗುರುತಿಸಬಹುದಾದರೂ ಇತ್ತೀಚೆಗೆ ಬ್ರಾಹ್ಮಣರು ಸಹ ಒತ್ತಕ್ಷರದ ಬೈಗುಳಗಳನ್ನು ಬಳಸುತ್ತಿದ್ದಾರೆ. ಬ್ರಾಹ್ಮಣ ಬೈಗುಳಗಳು ತಲೆಕುಟ್ಟಿ, ಭಜ್ಜಿ ಮಾಡ್ತೀನಿ, ಚಟ್ನಿ ಮಾಡ್ತೀನಿ ಬ್ರಾಹ್ಮಣೇತರ ಬೈಗುಳಗಳು ಕೈಮಾ ಮಾಡ್ತೀನಿ, ಬೋಟಿ ತೆಗೆತಿನಿ ಇನ್ನೂ ಅಥವಾ ಇಲ್ಲದೆ ಮೂಲವೇ ಗೊತ್ತಿಲ್ಲದ ಶಬ್ದಗಳು ಬೈಗುಳಗಳಾಗಿ ಬಳಕೆಯಾಗುತ್ತಿವೆ.

ಬೈಗುಳಗಳಲ್ಲಿ ಕೆಲವು ಸ್ತ್ರೀಯರು ವಿಶೇಷವಾಗಿ ಬಳಸುವಂತಹ ನಿನ್ನ ಮನೆಹಾಳಗ, ಚಂಡಾಲ, ಪಾಪಿಷ್ಟ, ಮೆರೆದು ಮಣ್ಣಗುತ್ತಿಯಾ, ಬಾಯಿಗೆ ಮಣ್ಣುಹಾಕು, ನೆಗೆದು ಬಿದ್ದಹೋಗು, ಕೈಗೆ ಕರಿನಾಗರ ಹಾವು ಕಡಿಯ ಹೀಗೆ ಸಾಗುತ್ತದೆ, ಕೋಪ ಮೀತಿ ಮೀರಿದಾಗ ತಾವು ಸಾಮಾನ್ಯವಾಗಿ ಬಳಸುವ ಬೈಗುಳದಿಂದ ಕೋಪ ಕಡಿಮೆಯಾಗದಿದ್ದಾರೆ ಪುರುಷರು ಬಳಸುವ ಬೈಗುಳಗಳನ್ನು ಬಳಸುತ್ತಾರೆ. ಹೀಗೆ ಬೈಗುಳಗಳು ನಮ್ಮ ದೈನಂದಿನ ಜೀವನ ಹಾಗೂ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿದೆ, ಒಂದು ವೇಳೆ ಯಾರು ಯಾರಿಗೂ ಯಾವುದೇ ರೀತಿಯ ಬೈಗಳಗಳನ್ನು ಬಳಸಬಾರದು ಎಂದು ಬೈಗುಳಗಳಿಗೆ ನಿಷೇದಾಜ್ಞೆ ಜಾರಿಯಾದರೆ ಬೈಗುಳಗಳೇ ಇಲ್ಲದ ಜೀವನವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ.

ಜಾನಪದ ಆಟಗಳು : ಜಾನಪದ ಕ್ರೀಡೆಗಳು ಗ್ರಾಮೀಣ ಜನರಿಂದ ಮನೋರಂಜನೆಗಾಗಿ ದೈಹಿಕ ವ್ಯಾಯಾಮಕ್ಕಾಗಿ ರಚಿಸಲ್ಪಟ್ಟ ಆಟಗಳು ಇವುಗಳಲ್ಲಿ ಕಂಡು ಬರುವ ಸಾಮಾನ್ಯ ಅಂಶವೆಂದರೆ ಇವು ಅತೀ ಕಡಿಮೆ ಹಾಗೂ ಸುಲಭವಾಗಿ ದೊರಕುವ ಸಾಮಾಗ್ರಿಗಳನ್ನು ಬಳಸಿಕೊಂಡು ಆಟವಾಡಿ ನೆರೆದವರನ್ನು ರಂಜಿಸುವುದು. ಲಗೋರಿ, ಕುಂಟೆಬಿಲ್ಲೆ, ಮರಕೋತಿಯಾಟ, ಚಿನ್ನಿದಂಡು, ಬುಗುರಿ, ಕಣ್ಣಮುಚ್ಚಲೇ, ಅಳ್ಳುಮನೆ, ಆಣೆಕಲ್ಲು ಹಗ್ಗಜಗ್ಗಾಟ ಮುತಾಂದವು ಜನಪದ ಕ್ರೀಡೆಗಳಾಗಿವೆ. ಎಲ್ಲಾ ಜನಾಂಗಗಳಲ್ಲೂ ಪ್ರದೇಶಗಳಲ್ಲಿ ಹಿಂದಿನ ದಿನಗಳಿಂದಲೆ ಪ್ರಚಲಿತವಾಗಿರುವ ಆನೇಕ ಜಾನಪದ ಆಟಗಳಿವೆ, ಆಟಗಳು ಪ್ರಾಚೀನ ಸಂಸ್ಕೃತಿಯನ್ನು ತಕ್ಕಮಟ್ಟಿಗೆ ಬಿಂಬಿಸುವುದು ಕೂಡ ಆಗಿದೆ, ಅಜ್ಜಿಯಾಟ, ತೋಳತೊಟ್ಟಲಾಡ, ಕೋಳಿಕಾದುವಿಕೆ, ಕುದುರೆ ಆಟ, ಬೀಸೋಹೊಡೆತ, ಉಪ್ಪಟಾ ಕಪ್ಪೆಲಾಗ, ಉಸಿರು ಕಟ್ಟಿಸುವುದು ಡೊಂಕು ಹಾಕುವುದು ಕಾಗೆ ಗಿಳಿ, ಕಬಡ್ಡಿ ಹುಲಿದನ ಪುಣಚ್ಛೆಲ ಆಟ, ಪಲ್ಲಿಪತ್, ಮರಕೋತಿಯಾಟ, ಸೋಲಾಟ, ಅವಿತುಕೊಳ್ಳುವಾಟ, ದುರ್ಸುಬಾಣ, ನೀರಮೇಲೆ ಕಪ್ಪೆಲಾಗ, ತಪ್ಪಲಾಗಾಯಿ, ಚೆಂಡು ಹೊಡೆತ, ಕುಟ್ಟು ದೊಣ್ಣೆ, ಏಳುಪಲ್ಲೆಯಾಟ, ಬುಗುರಿ, ಜುಬುಲಿ, ಗೋಲಿಯಾಟ, ಏಳುಗುಳಿಯಾಟ, ಕಣ್ಣಮುಚ್ಚಲೇ ಆಟ, ಗಡಿಯಾಟ, ಗೇರುಬೀಜದಾಟ, ಮುಂತಾದವು ಹೊರಾಂಗಣ

ಆಟಗಳನ್ನು ಜನರು ಆಡುತ್ತಿದ್ದರು, ಚೆನ್ನಮಣೆ, ಹುಣಸೇ ಬೀಜಗಳಿಂದ ಆಡುವ ಆಟ ಮುಂತಾದ ಒಳಾಂಗಣ ಆಟಗಳನ್ನು ಆಡುತ್ತಿದ್ದರು. ಇವು ಏಳೆಯರ ಸತ್ವಪೂರ್ಣ ಬೆಳವಣೆಗೆಗೆ ಸಹಕಾರಿಯಾಗಬಲ್ಲದು ಎಲ್ಲಾ ಆಟಗಳು ಕೆಲವೊಂದು ನಿಯಮಗಳ ಚೌಕಟ್ಟಿನಲ್ಲಿ ಸಾಗುವುದರಿಂದ ಪರ್ಯಾಯವಾಗಿ ಒಂದು ಬಗೆಯ ಶಿಸ್ತನ್ನು ಮೂಡಿಸುತ್ತವೆ ಎನ್ನಬಹುದು.

ಜಾನಪದ ಆಟಗಳನ್ನು ಮಕ್ಕಳ ಆಟಗಳು, ಗಂಡಸರ ಆಟಗಳು, ಹೆಣ್ಣುಮಕ್ಕಳ ಆಟಗಳ ಮನರಂಜನೆಯನ್ನು ಮುಖ್ಯಗುರಿಯಾಗಿಸಿಕೊಂಡು ಮಕ್ಕಳು ಸಂತೋಷದಿಂದ ಆಡುತ್ತ ಬೇಳೆಯಬೇಕೆಂಬ ಸಾಮಾಜಿಕ ಪ್ರಜ್ಞೆ ಮಕ್ಕಳ ನೂರಾರೂ ಆಟಗಳು ಇವೆ, ಮಕ್ಕಳ ಎಲ್ಲಾ ಆಟಗಳಲ್ಲಿ ಸ್ಪರ್ಧೆಯಿದ್ದು ಇರುತ್ತದೇನೆಂಬುಹುದೆ ಇಲ್ಲ ಮಕ್ಕಳ ಸಂತೋಷಕ್ಕೆ ಸುಮ್ಮನೆ ಕೆಲವು ಆಟಗಳನ್ನು ಆಡುವುದುಂಟು ಅವುಗಳು ಎಂದರೆ ಹೊಳೆ, ಹಳ್ಳಕೊಳ್ಳಗಳು, ಹಂಚಿನಲ್ಲಿ ಗೂಬ್ಬಿಗೂಡು ಆಡುವುದು, ಗಾಳಿಪಟದ ಆಟ ಮಣ್ಣಿನಲ್ಲಿ ಎತ್ತಿನಗಾಡಿ ಮಾಡಿಕೊಂಡು ಅಥವಾ ಮಣ್ಣಿನಿಂದ ಗೊಂಬೆಗಳನ್ನು ಮಾಡಿಕೊಂಡು ಆಡುವುದು ಇವುಗಳಲ್ಲಿ ಇಂಥವರೆ ಗೆದ್ದೆವರು ಎಂಬ ಅಂತಿಮ ತೀರ್ಮಾನವಿಲ್ಲ, ನಗರ ಪ್ರದೇಶದ ಆಟಗಳಿಗೂ ಜಾನಪದ ಆಟಗಳಿಗೂ ಬಹಳಷ್ಟು ವ್ಯತ್ಯಾಸಗಳು ಇರುವುದು ಕಂಡುಬರುತ್ತವೆ, ನಾಗರಿಕ ಮಕ್ಕಳಿಗಿಂತಲೂ ಜಾನಪದ ಮಕ್ಕಳು ಬುದ್ದಿಯಲ್ಲಾಗಲಿ, ಶಕ್ತಿಯಲ್ಲಿ ಆಗಲಿ, ಜಾಣ್ಮೆಯಲ್ಲಿಗಾಲಿ ಕಡಿಮೆ ಇರಲಿಲ್ಲ, ಮಕ್ಕಳ ಜಾಣ್ಮೆ, ಚಾಕಚಕ್ಯತೆ, ಸಾಹಸ ಶಕ್ತಿ ಪ್ರತಿಭೆಗಳು, ಜಾನಪದ ಆಟಗಳ ಮೂಲಕ ಕಂಡುಬರುತ್ತವೆ, ಮಕ್ಕಳ ಬಾಲ್ಯವ್ಯವಸ್ಥೆಯ ಅನುಕರಣೆ ಜಾನಪದ ಆಟಗಳ ಒಂದು ವಿಧಾನ ಎನ್ನಬಹುದು.

ಜನಪದ ಗೀತೆಗಳು: ಅನಕ್ಷರಸ್ಥ ಜನಸಮುದಾಯದ ಆಸ್ತಿಯಾಗಿರುವ ಈ ಜಾನಪದ ಗೀತೆಗಳು ಶತಮಾನಗಳಿಂದ ನೆನಪಿನ ತಳಹದಿಯಾಗಿ ಉಳಿದು ಬೆಳೆದು ಬಂದಿರುವ ರೀತಿಯೇ ಅತ್ಯಂತ ವಿಸ್ಮಯಕಾರಿಯಾಗಿದೆ, ಪ್ರತಿಭಾ ಸಂಪನ್ನವಾದ ಭಾವ ತೀವ್ರತೆಯೇ ಜನಪದ ಗೀತೆಗಳ ಮೂಲಸತ್ವವಾಗಿದ್ದು ಇವುಗಳನ್ನು ರಚಿಸುವ ಹಾಡುವ ಬೋದಿಸುವ ಯಾವ ಕ್ರಮಬದ್ಧತಂತ್ರವೂ ಬಳಕೆಯಲ್ಲಿ ಇಲ್ಲ ಕೇಳುವುದರಿಂದ ನೆನಪಿಟ್ಟುಕೊಳ್ಳುವುದರಿಂದ, ಹಾಡುವವರೊಂದಿಗೆ ಧ್ವನಿಗೊಡಿಸುವುದರಿಂದಲೇ ಜನಪದ ಗೀತೆಗಳನ್ನು ಕಲಿಯಬೇಕಾಗುತ್ತದೆ, ಈ ಮಾದರಿಯಲ್ಲೇ ಅವು ತಲೆಮಾರಿನಿಂದ ತಲೆಮಾರಿಗೆ ಜೀವಂತವಾಗಿ ಉಳಿದುಕೊಂಡು ಬಂದಿವೆ. ವ್ಯಕ್ತಿ ಜೀವನದ ನಿರ್ಣಾಯಕ ಘಟ್ಟಗಳೆನಿಸಿದ ಬಾಲ್ಯ, ಯೌವನ, ಮದುವೆ, ಸಾವು ಇಂಥ ಸಂದರ್ಭಗಳಲ್ಲಿ ಕಾಣಿಸಿಕೊಳ್ಳುವ ಆಚರಣೆಗಳಿಗೆ ಹಿನ್ನೆಲೆಯಾಗಿ ಹಾಡುಗಳು ಇದ್ದೆ ಇರುತ್ತವೆ ಸೃಷ್ಟಿ ಕಾಯಕದ ಎಲ್ಲ ಸಂದರ್ಭಗಳಲ್ಲಿ ಬೀಸೋ ಕಲ್ಲಿನ ಪದಗಳು, ಕುಟ್ಟುವ ಸಂದರ್ಭದ ಹಾಡುಗಳು ಈ ನಾಡಿನಲ್ಲಿಪ್ರಸಿದ್ಧವಾಗಿವೆ ದೇವರ ಕಲ್ಪನೆ ಜನಪದರ ಬದುಕಿನ ಅನಿವಾರ್ಯ ಭಾಗವಾಗಿದೆ. ಕೌಟುಂಬಿಕ ಬಾಂಧವ್ಯಗಳನ್ನು ಬಿತ್ತರಿಸುವ ಗೃಹ ಜೀವನದ ಕಷ್ಟಸುಖಗಳನ್ನು ಬಿಂಬಿಸುವ ಹಾಡುಗಳಂತೂ ಹೃದಯಂಗಮವಾಗಿವೆ. ಕೆಲವು ಹಬ್ಬಗಳಲ್ಲೂ ಮದುವೆಗಳಲ್ಲೂ ಹಾಡುವ ಹಸ್ಯಲೇಪಿತ ಶೃಂಗಾರ ಗೀತೆಗಳಿವೆ.

ಹಳ್ಳಿಬದುಕಿನ ಸೌಂದರ್ಯವಿರುವುದೇ ಅಲ್ಲಿಯ ಸಂಬಂಧಗಳ ಮಧುರ ಅನುಭೂತಿಯಲ್ಲಿ. ಎಲ್ಲ ಸಂಬಂಧಗಳ ಜತೆಜತೆಯೇ ಹಳ್ಳಿಯ ಬದುಕು ಸಾಗುತ್ತದೆ, ಒಂದೊಂದು ಸಂಬಂಧಕ್ಕೂ ಒಂದೊಂದು ಗುಣವಿದೆ ಅದರದ್ದೆ ಆದ ಸೆಳೆತವಿದೆ. ಎಲ್ಲ ಸಂಬಂಧಗಳ ಸೊಗಸನ್ನು ಜಾನಪದ ಸಾಹಿತ್ಯ ನವಿರಾಗಿ ಬಿಡಿಸಿಡುತ್ತದೆ. ಜನಪದರಿಗೆ. ಹಾಡು ಕಲೆ ಬದುಕಿನ ಭಾಗ ತಮ್ಮ ಹಾಡಿಕೊಂಡು ಇದ್ದವರು ಹಾಡಿನ ಜೋಡಿಯಿಲ್ಲದೇ ಯಾವ ಕೆಲಸವೂ ಸಾಗುವುದಿಲ್ಲ ಹೊಲ ಉಳುವಾಗ ಕೂರಿಗೆ ಹೊಡೆಯುವಾಗ ಕಳೆ ಕೀಳುವಾಗ ನಾಟಿ ಹಾಕುವಾಗ ಪೈರು ಕೀಳುವಾಗ ಕಾಳು ಒಕ್ಕುವಾಗ ಮೊಸರು ಕಡೆಯುವಾಗ ಅಡಿಕೆ ಸುಲಿಯುವಾಗ ಮಗು ಮಲಗಿಸುವಾಗ ಹಚ್ಚೆ ಹೊಯ್ಯುವಾಗ ಬೀಸುವಾಗ ಕುಟ್ಟುವಾಗ ನೇಯುವಾಗ ಇತರ ಎಲ್ಲ ಕೆಲಸಗಳನ್ನು ಮಾಡುವಾಗ ಅವರಿಗೆ ಹಾಡೇ ಸಂಗಾತಿ. ಇನ್ನು ಮದುವೆ, ಮುಂಜಿ, ನಾಮಕರಣ, ಹಾಸೆ ಇತ್ಯಾದಿ ಯಾವುದೇ ಶುಭ ಕಾರ್ಯವಿದ್ದರೂ ಅಲ್ಲಿ ಹಾಡು ಇದ್ದೇ ಇರಬೇಕು ಕಡೆಗೆ ಸಾವಿರ ಸಂದರ್ಭದಲ್ಲೂ ಕಾಡಿ ಹೇಳುವ (ಸತ್ತವರ ಗುಣಗಾನ ಮಾಡುವುದು) ಹಾಡುಗಾರಿಕೆ ಇಷ್ಟೇ ಇರುತ್ತದೆ. ನಮ್ಮ ಜನಪದರು ದೈವಭಕ್ತರು ಅವರ ಕಣ್ಣಲ್ಲಿ ನಿಸರ್ಗವೇ ದೈವ, ಭೂಮಿ ತಾಯಿಯೇ ಅವರ ಮೊದಲ ದೈವ ಬೆಳಗಾಗಿ ಎದ್ದು ಅವರು ಎಳ್ಳು ಜೀರಿಗೆ ಬೆಳೆಯೋ ಭೂಮಿ ತಾಯಿಯನ್ನೆ ನೆನೆಯುತ್ತಾರೆ. ಈ ಜನಪದ ಗೀತೆಗಳನ್ನು ಸೃಷ್ಟಿಸಿದವರು ಯಾರೆಂದು ಹೇಳುವುದು ಸಾಧ್ಯವಿಲ್ಲ, ಇವು ಹಳ್ಳಿಯ ಸಾಮಾನ್ಯ ಜನರ ನಡುವೆ ಹುಟ್ಟಿ ಬಾಯಿಂದ ಬಾಯಿಗೆ ಹಾದು ಬಂದಿರುವ ಸಿರಿನುಡಿ ಎನ್ನಬಹುದು ಇಂತಹ ಗೀತೆಗಳನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ ಹಳ್ಳಿಜನರು ಶ್ರಮ ಜೀವಿಗಳು ನಿಸರ್ಗ ಪ್ರೇಮಿಗಳು ಇವರು ವ್ಯವಸಾಯವನ್ನೇ ಅವಲಂಬಿಸಿ. ಅದನ್ನೆ ತಮ್ಮ ಜೀವನೋಪಾಯವನ್ನಾಗಿ ಮಾಡಿಕೊಂಡು ಆದರಿಂದ ಬರುವ ಲಾಭ ನಷ್ಟಗಳಿಗೆ ಹಿಗ್ಗದೆ ಕುಗ್ಗದೆ ಸಮತೋಲನ ಜೀವನವನ್ನು ನಡೆಸುತ್ತಿದ್ದಾರೆ. ಜನಪದರ ಚರಿತ್ರೆಯನ್ನು ಯಾರು ಬರೆದಿಲ್ಲವದರೂ, ಜನರ ನಿರಂತರ ಆಚರಣೆ ಅದು ಬದಲಾಗದಂತೆ ಕಾಪಾಡಿಕೊಂಡು ಬಂದಿದೆ. ಬೆಳೆದ ಬೆಳೆಗೆ ಬೆಲೆಯಿಲ್ಲ ಜಾಗತೀಕರಣದ ಸುಂಟರಗಾಳಿಗೆ ಸಿಕ್ಕಿ ಹಳ್ಳಿಗಳೇ ನಾಶವಾಗುತ್ತಿವೆ. ನಗರದ ಸುತ್ತಮುತ್ತಲ ಹಳ್ಳಿಗಳು ಆಧುನಿಕತೆ ಬಿರುಗಾಳಿಗೆ ಸಿಕ್ಕಿದೇ ದೊಡ್ಡ ದೊಡ್ಡ ಬಹುರಾಷ್ಟ್ರಿಯ ಕಂಪನಿಗಳಿಗೆ ಸರ್ಕಾರದ ಬೃಹತ್ ಯೋಜನೆಗಳಿಗೆ ನುಣುಪಾದ ಆಗಲಗಲ ರಸ್ತೆಗಳಿಗಾಗಿ ರೈತರ ಜಮೀನುಗಳನ್ನು ನಾಶಪಡಿಸಲಾಗಿದೆ ದುಡಿಮೆಯ ಬಡತನ ಅಳಿಸಲು ಸಾಧನ ಅಂತ ಹಾಡಿದ ರೈತ ಹಳ್ಳಿಯಲ್ಲಿ ಅನುಭವಿಸಿದ ಬಡತನ ಅಳಿಸಿಹಾಕಲು ನಗರಕ್ಕೆ ಬಂದು ಕುಳಿತಿದ್ದಾನೆ. ಹಳ್ಳಿಗಳು ನಾಶವಾದಂತೆ ಆ ಹಳ್ಳಿಯ ಅನನ್ಯ ಸಂಸ್ಕೃತಿ, ಪರಂಪರೆ, ದೇವರು ಜಾತ್ರೆ, ತೇರು, ಕುಣಿತ, ಹಶಡು ಸಂಪ್ರದಾಯ ಎಲ್ಲವೂ ನಾಶವಗುತ್ತವೆ. ಹಳ್ಳಿಯನ್ನು ತೊರೆದು ಪಟ್ಟಣ ಸೇರಿದವರಿಗೆ ಆ ಪಟ್ಟಣದ ಬದುಕಿನ ಜತೆ ಹೊಂದಿಕೊಳ್ಳುವ ಅನಿವಾರ್ಯತೆ ಹೀಗಾಗಿ ಜಾನಪದ ಸಂಸ್ಕೃತಿಯೇ ನಾಶವಾಗುವ ಸ್ಥಿತಿ ತಲುಪಿದೆ ಎನ್ನಬಹುದಾಗಿದೆ.